ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN (E): 2582-2284
Vol-1 Issue 1, July-August 2019, 122-130
©IIMRD, Mysuru
IIMRD JOURNALS
www.iimrd.com

# ಚಾಮರಾಜನಗರ ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನ: ಒಂದು ಅವಲೋಕನ

ಕುಮಾರಸ್ವಾಮಿ ಎ.ಎನ್.[1]

**ಪೀಠಿಕೆ:**

ಭಾರತವು ವಿವಿಧ ಜಾತಿ, ಬುಡಕಟ್ಟು ಜನಾಂಗ, ಧರ್ಮ, ಸಮಾಜ, ಸಂಸ್ಕೃತಿ ಮತ್ತು ಆರ್ಥಿಕ ಪದ್ಧತಿಯನ್ನು ಒಳಗೊಂಡಿರುವ ರಾಷ್ಟ್ರವಾಗಿದೆ. ಭಾರತದಲ್ಲಿ ಸ್ವಾತಂತ್ರ್ಯ ನಂತರ ವಿವಿಧ ಲಕ್ಷಣಗಳ ಆಧಾರದ ಮೇಲೆ 705 ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟು ಸಮುದಾಯಕ್ಕೆ ಸೇರಿಸಲಾಗಿದೆ. ಇವರು ತಮ್ಮದೇಯಾದ ಆಚಾರ–ವಿಚಾರ, ಉಡುಗೆ–ತೊಡುಗೆ, ಆಹಾರ ಪದ್ಧತಿ ಮತ್ತು ನಂಬಿಕೆಗಳೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಬುಡಕಟ್ಟು ಅಭಿವೃದ್ಧಿಯ ಹೆಸರಿನಲ್ಲಿ ಅನುಷ್ಠಾನಗೊಳಿಸಿದ ಹಲವಾರು ಯೋಜನೆಗಳು ಬುಡಕಟ್ಟು ಜನರ ಜೀವನಕ್ಕೆ ಮಾರಕವಾಗಿ ಪರಿಣಮಿಸಿದವು. ಅವುಗಳಲ್ಲಿ ಪ್ರಮುಖವಾದದ್ದು 1972ರ ವನ್ಯಜೀವಿ ಕಾಯ್ದೆ ಮತ್ತು ಅಣೆಕಟ್ಟುಗಳ ನಿರ್ಮಾಣ, ಹುಲಿಯೋಜನೆ, ವನ್ಯಜೀವಿಧಾಮ ಘೋಷಣೆ, ಅರಣ್ಯ ಸಂರಕ್ಷಣೆ ಕಾಯ್ದೆ, ರಾಷ್ಟ್ರೀಯ ಉದ್ಯಾನವನಗಳ ನಿರ್ಮಾಣ ಇತ್ಯಾದಿ.

ಈ ಕಾಯ್ದೆಗಳು ಅನುಷ್ಟಾನಕ್ಕೆ ಬಂದ ನಂತರ ಅರಣ್ಯದೊಳಗೆ ವಾಸಿಸುತ್ತಿದ್ದ ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಲಾಯಿತು ಹಾಗೂ ಅವರಿಗೆ ಪುನರ್‌ವಸತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಆದರೆ ಆ ಪುನರ್‌ವಸತಿ ಕೇಂದ್ರಗಳಲ್ಲಿ ಮೂಲಸೌಲಭ್ಯಗಳ ಕೊರತೆಯಿಂದಾಗಿ ಬುಡಕಟ್ಟು ಜನರು ಸಂಕಷ್ಟದ ಜೀವನವನ್ನು ಸಾಗಿಸುವಂತಾಯಿತು. 'ಐತಿಹಾಸಿಕ' ಅಸಮಾನತೆಯನ್ನು ಸರಿಪಡಿಸುವುದಕ್ಕಾಗಿ ಕೇಂದ್ರ ಸರ್ಕಾರವು 2008ರಲ್ಲಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ, 2006 ರನ್ನು ಜಾರಿಗೊಳಿಸಲಾಯಿತು. ಪ್ರಸ್ತುತ ಲೇಖನದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಅಈ ಕಾಯ್ದೆಯ ಅನುಷ್ಟಾನ ಕುರಿತು ವಿಮರ್ಶಿಸಲಾಗಿದೆ.

**ಅಧ್ಯಯನ ಕ್ಷೇತ್ರ:**

ಪ್ರಸ್ತುತ ಅಧ್ಯಯನಕ್ಕೆ ಚಾಮರಾಜನಗರ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಚಾಮರಾಜನಗರ ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ಭಾಗದಲ್ಲಿದ್ದು ಮೂಲವಾಸಿ ಬುಡಕಟ್ಟು ಗಿರಿಜನರಾದ ಸೋಲಿಗರು, ಬೆಟ್ಟಕುರುಬರು ಮತ್ತು ಜೇನುಕುರುಬರು ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಶತ–ಶತಮಾನಗಳಿಂದಲೂ ವಾಸ

---

*[1] ಸಂಶೋಧಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು.*

ಮಾಡುತ್ತಿದ್ದಾರೆ, ಯಳಂದೂರು 10, ಕೊಳ್ಳೇಗಾಲ 80, ಚಾಮರಾಜನಗರ 25 ಮತ್ತು ಗುಂಡ್ಲು ಪೇಟೆ 33 ಪೋಡು/ ಕಾಲೋನಿಗಳನ್ನೊಳಗೊಂಡಂತೆ ಒಟ್ಟು 148 ಪೋಡು/ಕಾಲೋನಿಗಳಲ್ಲಿ ಸುಮಾರು 45000 ಮೂಲವಾಸಿಗಳು ವಾಸಮಾಡುತ್ತಿದ್ದಾರೆ, ಮೂಲವಾಸಿಗಳು ಅರಣ್ಯದ ಮೇಲೆ ಅವಲಂಬಿತರಾಗಿ ದಿನನಿತ್ಯಕ್ಕೆ ಬೇಕಾದ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಮತ್ತು ಕಿರುಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಮತ್ತು ವ್ಯವಸಾಯ ಮಾಡಿ ಜೀವನ ನಡೆಸುತ್ತಿದ್ದಾರೆ.

**ಅಧ್ಯಯನದ ಉದ್ದೇಶ:**

1. ಅರಣ್ಯ ಹಕ್ಕು ಕಾಯ್ದೆಯ ಮಹತ್ವನ್ನು ತಿಳಿಯುವುದು.
2. ಬುಡಕಟ್ಟು ಜನರ ಸಾಮಾಜಿಕ ಮತ್ತು ಆರ್ಥಿಕ ಆರ್ಥಿಕ ಸಬಲೀಕರಣದಲ್ಲಿ ಅರಣ್ಯಹಕ್ಕು ಕಾಯ್ದೆಯ ಪಾತ್ರವನ್ನು ಅಧ್ಯಯನ ಮಾಡುವುದು.

**ಅರಣ್ಯ ಹಕ್ಕು ಕಾಯ್ದೆಯ ಹಿನ್ನಲೆ:**

ಅರಣ್ಯ ಹಕ್ಕು ಕಾಯಿದೆ ಎನ್ನುವಂತಹುದನ್ನು ತಲತಲಾಂತರಗಳಿಂದ ಅರಣ್ಯಗಳಲ್ಲಿ ವಾಸಿಸುತ್ತಿರುವ ಅಂದರೆ ಅವರ ಹಕ್ಕುಗಳನ್ನು ದಾಖಲಿಸಿರದ ಅರಣ್ಯವಾಸಿ ಅನುಸೂಚಿ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳ ಮತ್ತು ಅಧಿಭೋಗವನ್ನು ಮಾನ್ಯ ಮಾಡಲು ಮತ್ತು ನಿಹಿತಗೊಳಿಸಲು ಹಾಗೂ ಹಾಗೆ ನಿಹಿತಗೊಳಿಸಿದಾಗ ಅರಣ್ಯ ಹಕ್ಕುಗಳನ್ನು ಮತ್ತು ಅರಣ್ಯ ಜಮೀನಿಗೆ ಸಂಬಂಧಿಸಿದಂತಹ ಮಾನ್ಯತೆಗೆ ಹಾಗೂ ನಿಹಿತಗೊಳಿಸಿದ ಅಗತ್ಯವಾದ ಸಾಕ್ಷ್ಯದ ಸ್ವರೂಪವನ್ನು ದಾಖಲಾಗಿಸುವುದಕ್ಕಾಗಿ ನಿರ್ಧಿಷ್ಟ ರೂಪರೇಷೆಗೆ ಅವಕಾಶ ಕಲ್ಪಿಸುವ ಅಧಿನಿಯಮ ಎಂಬುದಾಗಿ ವ್ಯಾಖ್ಯಾನಿಸಲಾಗಿದೆ. (ಚಾಮರಾನಗರ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, 2015)

ಈ ಯೋಜನೆ ಅಡಿ ಗ್ರಾಮ ಅಥವಾ ಪೊಡು ಮಟ್ಟದಲ್ಲಿ ಅರಣ್ಯ ಹಕ್ಕು ಸಮಿತಿಗಳು ಹಾಗೂ ಅದರ ಉಪವಿಭಾಗ ಮತ್ತು ಜಿಲ್ಲಾಮಟ್ಟದಲ್ಲಿ ಅರಣ್ಯ ಹಕ್ಕು ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳ ಮುಖೇನ ಬುಡಕಟ್ಟು ಜನರಿಗೆ ವ್ಯವಸಾಯದ ಭೂಮಿಯನ್ನು ನೀಡುವುದು, ಅರಣ್ಯದಲ್ಲಿ ಕಿರು ಆಹಾರ ಉತ್ಪನ್ನಗಳನ್ನು ಸಂಗ್ರಹಿಸುವುದು ಮತ್ತು ಮಾರಾಟ ಮಾಡುವಂತಹ ಅವಕಾಶಗಳನ್ನು ಕಲ್ಪಿಸಲಾಗಿದೆ. ಬುಡಕಟ್ಟು ಜನರು ಅರಣ್ಯದೊಳಗಿನ ಪವಿತ್ರ ಸ್ಥಳಗಳಿಗೆ ಬೇಟಿ ನೀಡುವ ಹಕ್ಕನ್ನು ಸಹ ಹೊಂದಿರುತ್ತಾರೆ. ಅಂದರೆ ಗ್ರಾಮದ ಒಳಗೆ ಅಥವಾ ಹೊರಗೆ ಅರಣ್ಯದಲ್ಲಿ ಕಿರುಉತ್ಪನ್ನಗಳನ್ನು ಸಂಗ್ರಹಿಸುವ, ಅವುಗಳನ್ನು ಬಳಸುವ ಮತ್ತು ವಿಲೇವಾರಿ ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಹಾಗೂ ಜಲಮೂಲಗಳಲ್ಲಿ ಜಮೀನು ಮತ್ತು ಇತರ ಉತ್ಪನ್ನಗಳನ್ನು ಬಳಸುವ ಅಥವಾ ಅವುಗಳನ್ನು ಹೊಂದುವ, ಜಾನುವಾರುಗಳನ್ನು ಮೇಯಿಸುವ ಮತ್ತು ಅಲೆಮಾರಿ ಅಥವಾ ಗ್ರಾಮ ಸಮುದಾಯಗಳಿಗೆ ಇರುವ ಪಾರಂಪರಿಕ ಋತುಕಾಲಿಕ ಸಂಪನ್ಮೂಲಗಳನ್ನು ಹೊಂದುವ ಇತರೆ ಹಕ್ಕುಗಳನ್ನು ಹೊಂದಬಹುದಾಗಿದೆ. ಮತ್ತು ಸುಸ್ಥಿರ ಬಳಕೆಗಾಗಿ ಸಮುದಾಯವು ಪಾರಂಪರಿಕವಾಗಿ ರಕ್ಷಿಸುತ್ತಿರುವ ಯಾವುದೇ ಸಮುದಾಯದ ಅರಣ್ಯ ಸಂಪನ್ಮೂಲಗಳನ್ನು ರಕ್ಷಿಸುವ, ಪುನರ್ ಉತ್ಪಾದಿಸುವ ಅಥವಾ ನಿರ್ವಹಣೆ ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಇದಲ್ಲದೆ ಜೈವಿಕ ಅರ್ಹತೆಯ ಹಕ್ಕು ಮತ್ತು ಸಾಂಸ್ಕೃತಿಕ ವೈವಿಧ್ಯತೆ ಹಕ್ಕು, ಬೌದ್ಧಿಕ ಆಸ್ತಿ ಮತ್ತು ಪಾರಂಪರಿಕ ಜ್ಞಾನಕ್ಕೆ ಇರುವ ಸಾಮುದಾಯಿಕ

ಹಕ್ಕನ್ನು ಹೊಂದಿರುತ್ತಾರೆ. ಹಾಗೂ ಅವರು ಪವಿತ್ರ ಸ್ಥಳಗಳಲ್ಲಿ ಪೂಜಿಸುವ, ಬೇಟಿ ನೀಡುವ ಹಾಗೂ ಆರಾಧಿಸುವ ಹಕ್ಕನ್ನು ಹೊಂದಿರುತ್ತಾರೆ. ಈ ಕಾಯ್ದೆ ಅತಿ ವೈಯಕ್ತವಾಗಿ ಮತ್ತು ಅರಣ್ಯ ಹಕ್ಕುಗಳ ಸಮಿತಿಗೆ ಸಾಮುದಾಯಿಕ ಅರಣ್ಯಗಳನ್ನು ನೀಡಬೇಕಾಗಿರುತ್ತದೆ.

ಒಟ್ಟಾರೆ ಹೇಳುವುದಾದರೆ ಬುಡಕಟ್ಟು ಜನರ ಪಾರಂಪರಿಕ ಹಕ್ಕುಗಳನ್ನು ಸಂರಕ್ಷಿಸುವ ಹಾಗೂ ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿಗೊಳಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಮತ್ತು ಅವರ ಪಾರಂಪರಿಕ ಹಕ್ಕುಗಳನ್ನು ಮಾನ್ಯ ಮಾಡಿ ಸಂರಕ್ಷಿಸುವುದು ಈ ಕಾಯ್ದೆಯ ಪ್ರಮುಖವಾದ ಉದ್ದೇಶವಾಗಿದೆ.

**ಫಲಾನುಭವಿಗಳ ಆಯ್ಕೆಯ ವಿಧಾನ**

ಸ್ಥಳೀಯ ಅರಣ್ಯ ಹಕ್ಕುಗಳ ಸಮಿತಿ ಗ್ರಾ.ಪಂ. ನ ಗ್ರಾಮ ಸಭೆಗಳ ಮೂಲಕ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸಿ, ಉಪವಿಭಾಗ ಮಟ್ಟದ ಸಮಿತಿಗೆ ಸಲ್ಲಿಸಲಿದೆ. ಉಪವಿಭಾಗ ಮಟ್ಟದ ಸಮಿತಿ ಪರಿಶೀಲಿಸಿ, ಜಿಲ್ಲಾ ಮಟ್ಟದ ಸಮಿತಿಗೆ ಶಿಫಾರಸ್ಸು ಮಾಡಲಿದೆ. ಜಿಲ್ಲಾಧಿಕಾರಿ ನೇತೃತ್ವದ ಜಿಲ್ಲಾ ಸಮಿತಿ ಶಿಫಾರಸ್ಸು ಮಾಡಲಿರುವ ಪಟ್ಟಿಯನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದ ರಾಜ್ಯ ಸಮಿತಿ ಆಖೈರುಗೊಳಿಸಲಿದೆ.

**ಸೌಲಭ್ಯಗಳು**

1. ಅರಣ್ಯ ಹಕ್ಕು ಪತ್ರ ಪಡೆದ ಅರಣ್ಯ ವಾಸಿಗಳನ್ನು ಯಾವುದೇ ಕಾರಣಕ್ಕೂ ಇಲಾಖೆ ಒಕ್ಕಲೆಬ್ಬಿಸುವಂತಿಲ್ಲ.
2. ಅರಣ್ಯವಾಸಿಗಳು ಮರಮುಟ್ಟುಗಳಲ್ಲದ ಕಿರುಅರಣ್ಯ ಉತ್ಪನ್ನಗಳು ಅಂದರೆ, ಬಿದಿರು, ಜೇನು, ಮೇಣ, ಅರಗು, ಔಷಧೀಯ ಸಸ್ಯಗಳು, ಗೆಡ್ಡೆ–ಗೆಣಸು ಸಂಗ್ರಹಿಸಲು ಹಾಗೂ ಅವುಗಳನ್ನು ಜೀವನೋಪಾಯಕ್ಕಾಗಿ ಹೊರಗೆ ಮಾರಾಟ ಮಾಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.
3. ಅರಣ್ಯವಾಸಿಗಳು ವಾಸ ಮಾಡುವುದಕ್ಕಾಗಿ ಅಥವಾ ಜೀವನ ನಿರ್ವಹಣೆಗಾಗಿ ಸ್ವತಃ ಸಾಗುವಳಿ ಮಾಡಲು ವೈಯಕ್ತಿಕ ಅಥವಾ ಸಮುದಾಯ ಅಧಿಭೋಗದ ಮೇರೆಗೆ ಅರಣ್ಯ ಜಮೀನನ್ನು ಹೊಂದುವ ಹಾಗೂ ಅಲ್ಲಿ ಜೀವಿಸುವ ಹಕ್ಕು ಪಡೆಯಲಿದ್ದಾರೆ.
4. ಸಮುದಾಯ ಸೌಲಭ್ಯದಡಿ ಪ್ರತಿ ಹೆಕ್ಟೇರ್‌ಗೆ 75 ಮರಗಳನ್ನು ಮೀರದಂತೆ ಕಡಿಯುವುದಕ್ಕೆ ಅವಕಾಶವಿರುವ ಅರಣ್ಯ ಜಮೀನಿನಲ್ಲಿ ಜನಾಂಗದ ಅನುಕೂಲಕ್ಕಾಗಿ ಶಾಲೆ, ಆಸ್ಪತ್ರೆ, ಅಂಗನವಾಡಿ, ನ್ಯಾಯ ಬೆಲೆ ಅಂಗಡಿ, ವಿದ್ಯುತ್ ದೂರವಾಣಿ ಸಂಪರ್ಕ, ಕೆರೆ, ಕುಡಿಯುವ ನೀರು ಸರಬರಾಜು, ರಸ್ತೆ ನಿರ್ಮಾಣ ಕೈಗೊಳ್ಳಲು ಅವಕಾಶವಿದೆ.

**ಕರ್ನಾಟಕ ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯಿದೆಯ ಅನುಷ್ಠಾನ ಮತ್ತು ಸಮಸ್ಯೆಗಳು**

ತಲತಲಾಂತರಗಳಿಂದ ಅರಣ್ಯದಲ್ಲಿ ನೆಲೆಸಿರುವ ಅರಣ್ಯ ವಾಸಿಗಳಿಗೆ ಅಲ್ಲೇ ಪುನರ್ವಸತಿ ಹಕ್ಕು ಕಲ್ಪಿಸುವಂತಹ ಮಹತ್ವಾಕಾಂಕ್ಷೆಯ 'ಅನುಸೂಚಿತ ಬುಡಕಟ್ಟುಗಳ ಹಾಗೂ ಇತರ ಪಾರಂಪರಿಕ ಅರಣ್ಯವಾಸಿಗಳ ಅಧಿನಿಯಮ–2006' ಜಾರಿಗೆ ಬಂದು ದಶಕವೇ ಕಳೆದರೂ ಈ ವರ್ಷದ ಸೆಪ್ಟೆಂಬರ್

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD

IIMRD JOURNALS

ಅಂತ್ಯದವರೆಗೆ ಕೇವಲ ಶೇ. 4.26 ರಷ್ಟು ಅರಣ್ಯವಾಸಿ ಗಳಿಗೆ ಮಾತ್ರ ಹಕ್ಕುಪತ್ರಗಳನ್ನು ನೀಡಲು ಸಾಧ್ಯವಾಗಿದೆ.

ಅರಣ್ಯ ಹಕ್ಕುಪತ್ರ ಬಯಸಿ ಪರಿಶಿಷ್ಟ ವರ್ಗ ಹಾಗೂ ಇತರೆ ಪಾರಂಪರಿಕ ಅರಣ್ಯ ವಾಸಿಗಳು ಸಲ್ಲಿಸಿದ ಒಟ್ಟು 3,01,657 ಅರ್ಜಿಗಳ ಪೈಕಿ, 1,70,259 ಅರ್ಜಿಗಳು ತಿರಸ್ಕರಿಸಲ್ಪಟ್ಟಿವೆ. 1,18,547 ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಉಳಿದಿವೆ. ಕೇವಲ 12,851 ಮಂದಿಗೆ ಅರಣ್ಯ ಹಕ್ಕನ್ನು ಕಲ್ಪಿಸಲಾಗಿದೆ.

2005 ರ ಡಿ.13 ಕ್ಕಿಂತ ಮುಂಚೆ ಜೀವನೋಪಾಯದ ಅವಶ್ಯಕತೆಗಳಿಗಾಗಿ ಅರಣ್ಯ ಅಥವಾ ಅರಣ್ಯ ಜಮೀನಿನ ಮೇಲೆ ಅವಲಂಬಿತರಾಗಿರುವ ಪರಿಶಿಷ್ಟ ವರ್ಗದವರು ಹಾಗೂ ಕೊನೆ ಪಕ್ಷ ಮೂರು ತಲೆಮಾರಿನವರಿಗೆ (ಒಂದು ತಲೆಮಾರಿಗೆ 25 ವರ್ಷ) ಪ್ರಧಾನವಾಗಿ ಅರಣ್ಯದಲ್ಲಿ ನೆಲೆಸಿರುವ ಇತರೆ ಪಾರಂಪರಿಕ ಅರಣ್ಯ ವಾಸಿಗಳು ವೈಯಕ್ತಿಕ ಹಾಗೂ ಸಮುದಾಯ ನಿಯಮದಡಿ ಹಕ್ಕು ಸ್ವಾಮ್ಯಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ. 2007 ಫೆ. 28 ರೊಳಗೆ ಅರಣ್ಯ ಹಕ್ಕು ಸಮಿತಿಗಳನ್ನು ರಚಿಸಿ, ಶೀಘ್ರ ಅಧಿನಿಯಮ ಅನುಷ್ಠಾನಕ್ಕೆ ತರುವಂತೆ ಅಂದಿನ ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸ್ಪಷ್ಟ ನಿರ್ದೇಶನ ನೀಡಿತ್ತು. ಆದರೆ, ಇದುವರೆಗೂ ನಿರೀಕ್ಷಿತ ಪ್ರಮಾಣದಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ಒದಗಿಸಲು ಸರ್ಕಾರದಿಂದ ಸಾಧ್ಯವಾಗಿಲ್ಲ ಎಂಬುದು ಅಂಕಿ–ಅಂಶಗಳಿಂದ ದೃಢಪಡುತ್ತದೆ.

ಉತ್ತರ ಕನ್ನಡ ಜಿಲ್ಲೆಯಿಂದ ಅರಣ್ಯ ಹಕ್ಕುಪತ್ರ ಬಯಸಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸಲ್ಲಿಕೆಯಾಗಿವೆ. ಜಿಲ್ಲೆಯಲ್ಲಿ ಸಲ್ಲಿಕೆಯಾದ ಒಟ್ಟು 1,17,881 ಅರ್ಜಿಗಳ ಪೈಕಿ, ಕೇವಲ 2,225 ಅರ್ಜಿದಾರರಿಗೆ ಮಾತ್ರ (ಶೇ.3.77) ಹಕ್ಕುಪತ್ರ ನೀಡಲಾಗಿದೆ. 59,253 ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು, 56,403 ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಉಳಿದಿವೆ. ಶಿವಮೊಗ್ಗ ಜಿಲ್ಲೆಯಿಂದ ಸಲ್ಲಿಕೆಯಾದ 85,518 ಅರ್ಜಿಗಳ ಪೈಕಿ, 30805 ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು, 52,141 ಅರ್ಜಿಗಳು ವಿಲೇವಾರಿಗೆ ಬಾಕಿ ಉಳಿದಿವೆ. ಕೇವಲ 2572 ಜನರಿಗೆ ಮಾತ್ರ ಹಕ್ಕುಪತ್ರ ನೀಡಲಾಗಿದೆ. ಚಿಕ್ಕಮಗಳೂರಿನಲ್ಲಿ 24,670 ಮೈಸೂರಿನಲ್ಲಿ 7,026, ಚಾಮರಾಜನಗರದಲ್ಲಿ 2,512, ಕೊಡಗಿನಲ್ಲಿ 3,613, ದಕ್ಷಿಣ ಕನ್ನಡದಲ್ಲಿ 2,382, ಉಡುಪಿಯಲ್ಲಿ 2,118, ರಾಮನಗರದಲ್ಲಿ 4,582 ಅರ್ಜಿಗಳು ಸಲ್ಲಿಕೆಯಾಗಿವೆ. ಗದಗ ಜಿಲ್ಲೆಯಲ್ಲಿ 796, ದಾವಣಗೆರೆಯಿಂದ 10,080 ಬೆಳಗಾವಿಯಿಂದ 17,424, ಚಿತ್ರದುರ್ಗದಿಂದ 4,693, ಹಾಸನದಿಂದ 492 ಅರ್ಜಿಗಳು ಸಲ್ಲಿಕೆಯಾಗಿದೆ. ಗದಗ ಜಿಲ್ಲೆಯಲ್ಲಿ 796, ದಾವಣಗೆರೆಯಿಂದ 10,080, ಬೆಳಗಾವಿಯಿಂದ 17,424 ಚಿತ್ರದುರ್ಗದಿಂದ 4,693 ಹಾಸನದಿಂದ 492 ಅರ್ಜಿಗಳು ಸಲ್ಲಿಕೆಯಾಗಿವೆ. ವಿಜಯಪುರ, ರಾಯಚೂರು, ಚಿಕ್ಕಬಳ್ಳಾಪುರ, ಬೀದರ್, ಕೋಲಾರ ಹಾಗೂ ಯಾದಗಿರಿ ಜಿಲ್ಲೆಗಳಿಂದ ಒಂದೇ ಒಂದು ಅರ್ಜಿ ಸಲ್ಲಿಕೆಯಾಗಿಲ್ಲ, ಅರಣ್ಯದಲ್ಲಿ ನೆಲೆಸಿರುವ ಬುಡಕಟ್ಟು ಜನರಿಗೆ ಅರಣ್ಯ ಹಕ್ಕು ಕಲ್ಪಿಸಲು ಸ್ಥಳೀಯ ಮಟ್ಟದಲ್ಲಿ ಒಟ್ಟು 12,728 ಅರಣ್ಯಹಕ್ಕು ಸಮಿತಿಗಳನ್ನು ರಚಿಸಲಾಗಿದೆ.

**ಚಾಮರಾಜನಗರ ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯಿದೆ ಅನುಷ್ಠಾನ**

ಚಾಮರಾಜನಗರ ಜಿಲ್ಲೆಯು ರಾಜ್ಯದಲ್ಲಿಯೇ ಅರಣ್ಯ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿರುವ ಕೀರ್ತಿಗೆ ಜಿಲ್ಲೆಯ ಭಾಜನವಾಗಿದೆ.

ಅರಣ್ಯ ಇಲಾಖೆ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ನಡುವಿನ ಹೊಂದಾಣಿಕೆಯ ಫಲವಾಗಿ ಕಾಯ್ದೆಯಡಿ ಜಿಲ್ಲೆಯ ಸೋಲಿಗರು ಮತ್ತು ಜೇನುಕುರುಬ ಸಮುದಾಯಕ್ಕೆ ಸೌಲಭ್ಯ ಸಿಕಿದೆ.

ಜಿಲ್ಲೆಯಲ್ಲಿ 1,915 ವೈಯಕ್ತಿಕ ಅರಣ್ಯ ಹಕ್ಕುಪತ್ರ ವಿತರಿಸಲಾಗಿದೆ. ಒಟ್ಟು 3,167.69 ಎಕರೆ ಅರಣ್ಯ ಪ್ರದೇಶವನ್ನು ಮಂಜೂರು ಮಾಡಲಾಗಿದೆ. 25 ಸಮುದಾಯ ಹಕ್ಕುಪತ್ರ ವಿತರಿಸಲಾಗಿದೆ. 106 ಹಕ್ಕುಪತ್ರಗಳ ವಿತರಣೆ ಮಾತ್ರವೇ ಬಾಕಿ ಉಳಿದಿದೆ. ಜಿಲ್ಲಾ ಅರಣ್ಯ ಹಕ್ಕು ಸಮಿತಿಯಿಂದ ಅಂತಿಮ ಹಂತದ ಪ್ರಕ್ರಿಯೆ ನಂತರ 8ನೇ ಹಂತದಲ್ಲಿ ಇವುಗಳ ವಿತರಣೆ ಮಾಡಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ

ಜಿಲ್ಲೆಯಲ್ಲಿ ಒಟ್ಟು 148 ಪೋಡುಗಳಿವೆ. ಇವುಗಳಲ್ಲಿ ಅರ್ಧದಷ್ಟು ಪೋಡುಗಳು ಅರಣ್ಯದೊಳಗಿವೆ. ಹಕ್ಕು ಪತ್ರ ಪಡೆಯಲು ಕಾಯ್ದೆ ಅನ್ವಯ ಮೂರು ತಲೆಮಾರಿನ ದಾಖಲೆ ಸಲ್ಲಿಸುವುದು ಕಡ್ಡಾಯ. ಈ ದಾಖಲೆ ಒದಗಿಸುವುದು ಕಷ್ಟಕರ. ಹಾಗಾಗಿ, ಗಿರಿಜನರನ್ನು ಹೊರತುಪಡಿಸಿದರೆ ಜಿಲ್ಲೆಯಲ್ಲಿ ಇತರೇ ವರ್ಗದ ಜನರು ಅರ್ಜಿ ಸಲ್ಲಿಸಿಲ್ಲ.

ಸಮುದಾಯ ಹಕ್ಕು ಪತ್ರದಡಿ ಗಿರಿಜನರು ಕಿರುಅರಣ್ಯ ಉತ್ಪನ್ನ ಸಂಗ್ರಹ, ಪೋಡುಗಳ ಬಳಿ ಇರುವ ಕೆರೆಗಳಲ್ಲಿ ಮೀನುಗಾರಿಕೆ ಹಕ್ಕು, ಪಾರಂಪರಿಕ ಜ್ಞಾನದ ಹಕ್ಕು, ಕಾಡಿನಲ್ಲಿ ದನ, ಮೇಕೆ, ಕುರಿ ಮೇಯಿಸುವ ಹಕ್ಕು ಪಡೆದಿದ್ದಾರೆ. ಜತೆಗೆ, ಕಾಡಿನ ಸಂರಕ್ಷಣೆ ಮತ್ತು ನಿರ್ವಹಣೆಯ ಹಕ್ಕು ಕೂಡ ನೀಡಲಾಗಿದೆ. ದೇಶದ ಯಾವುದೇ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಮುದಾಯದ ಹಕ್ಕುಪತ್ರ ವಿತರಿಸಿರುವ ನಿದರ್ಶನವಿಲ್ಲ. ಬಿಳಿಗಿರಿರಂಗನಾಥಸ್ವಾಮಿ ಹುಲಿ ರಕ್ಷಿತಾರಣ್ಯದಲ್ಲಿ ಮಾತ್ರವೇ ಗಿರಿಜನರಿಗೆ ಈ ಹಕ್ಕುಪತ್ರ ವಿತರಿಸಲಾಗಿದೆ.

ಉಪವಿಭಾಗ ಸಮಿತಿ ಮತ್ತು ಜಿಲ್ಲಾ ಅರಣ್ಯ ಹಕ್ಕು ಸಮಿತಿಯಲ್ಲಿ ಗಿರಿಜನರೇ ಸದಸ್ಯರಾಗಿದ್ದಾರೆ. ಜನಪ್ರತಿನಿಧಿಗಳ ಬೆಂಬಲಿಗರನ್ನು ಸಮಿತಿಯಿಂದ ದೂರ ಇಡಲಾಗಿದೆ. ಹಾಗಾಗಿ, ಕಾಯ್ದೆ ಅನ್ವಯ ಹಕ್ಕುಪತ್ರ ವಿತರಣೆಗೆ ಯಾವುದೇ ತೊಡಕು ಎದುರಾಗಿಲ್ಲ ಎನ್ನುತ್ತಾರೆ ಗಿರಿಜನ ಮುಖಂಡರು.

**274 ಅರ್ಜಿ ವಜಾ**: ಕೊಳ್ಳೇಗಾಲ ತಾಲ್ಲೂಕಿನ ಗೋಪಿನಾಥಂ ಬಳಿಯ ಕಾವೇರಿ ವನ್ಯಜೀವಿಧಾಮದ ಅಂಚಿನಲ್ಲಿರುವ 274 ಕುಟುಂಬಗಳು ವೈಯಕ್ತಿಕ ಹಕ್ಕುಪತ್ರಕ್ಕೆ ಅರ್ಜಿ ಸಲ್ಲಿಸಿದ್ದವು. ಆದರೆ, ಸೂಕ್ತ ದಾಖಲೆ ಸಲ್ಲಿಸಿರಲಿಲ್ಲ. ಹಾಗಾಗಿ, ಜಿಲ್ಲಾ ಸಮಿತಿಯು ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿದೆ.

ಜಿಲ್ಲೆಯಲ್ಲಿ ಸಮರ್ಪಕವಾಗಿ ಕಾಯ್ದೆ ಜಾರಿಗೊಂಡಿದ್ದು, ಗಿರಿಜನರಿಗೆ ಸೌಲಭ್ಯ ಸಿಕ್ಕಿದೆ. ಹಕ್ಕುಪತ್ರ ಪಡೆದಿರುವ ಫಲಾನುಭವಿಗಳ ಪೈಕಿ 18 ಮಂದಿ ಜೇನುಕುರುಬ ಸಮುದಾಯಕ್ಕೆ ಸೇರುತ್ತಾರೆ. ಉಳಿದ ಎಲ್ಲರೂ ಸೋಲಿಗರಾಗಿದ್ದಾರೆ.

ಜಿಲ್ಲಾ ಬುಡಕಟ್ಟು ಜನ ಅಭಿವೃದ್ಧಿ ಸಂಘ, ತಾಲೂಕು ಸೋಲಿಗ ಅಭಿವೃದ್ಧಿ ಸಂಘ, ಯಳಂದೂರು, ಚಾಮರಾಜನಗರ, ಕೊಳ್ಳೇಗಾಲ ಮತ್ತು ಗಿರಿಜನ ಶ್ರೇಯೋಭಿವೃದ್ಧಿ ಸಂಘ, ಗುಂಡ್ಲುಪೇಟೆ, ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಅಶೋಕ ಪರಿಸರ ಮತ್ತು ಪರಿಸರ ಸಂಶೋಧನೆ ಸಂಸ್ಥೆಗಳ ಸಹಯೋಗದೊಂದಿಗೆ ಪ್ರತಿ ಪೋಡು ಮತ್ತು ಕಾಲೋನಿಗಳಲ್ಲಿ ಅರಣ್ಯ ಹಕ್ಕು ಕಾಯಿದೆ 2006 ಮತ್ತು ನಿಯಮ 2008 ರ ಬಗ್ಗೆ

ಸಭೆ ನಡೆಸಿ ಅರಿವು ಮೂಡಿಸಿರುತ್ತಾರೆ ಮತ್ತು ಕಾಯಿದೆ ಕಿರು ಕೈಪಿಡಿ ಮುದ್ರಿಸಿ ಪ್ರತಿ ಕುಟುಂಬಗಳಿಗೆ ವಿತರಿಸಿರುತ್ತಾರೆ.

ಮೊದಲ ಹಂತದಲ್ಲಿ ಯರಕಟ್ಟೆಯಲ್ಲಿ ದಿನಾಂಕ 2.8.2010 ರಂದು ಜಿಲ್ಲೆಯ 115 ಕುಟುಂಬಗಳಿಗೆ ಭೂಮಿಯ ಹಕ್ಕು ಪತ್ರಗಳನ್ನು ವಿತರಿಸಲಾಯಿತು. ಎರಡನೇ ಹಂತದಲ್ಲಿ ದಿನಾಂಕ 8.10.2010 ರಂದು ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಮುತ್ತಗದಗದ್ದೆ ಪೋಡಿನಲ್ಲಿ 274 ಕುಟುಂಬಗಳಿಗೆ ಭೂಮಿಯ ಹಕ್ಕು ಪತ್ರಗಳನ್ನು ವಿತರಿಸಿದರು.

ಮೂರನೆ ಹಂತದಲ್ಲಿ 5.2.2011 ರಲ್ಲಿ 127 ಕುಟುಂಬಗಳಿಗೆ ಭೂಮಿಯ ಹಕ್ಕು ಪತ್ರಗಳನ್ನು ಹಿರಿಯಂಬಲ ಎಂಬ ಪೋಡಿನಲ್ಲಿ ವಿತರಿಸಿದರು, ಭೂಮಿಯ ಹಕ್ಕು ಪತ್ರಗಳನ್ನು ಬೇಡಗುಳಿ, ಹೊಸಪೋಡು, ಕಾಡಿಗೆರೆ, ಕುಂಟು ಗುಡಿ, ಮಾರಿಗುಡಿ ಪೋಡು, ಮುನೇಶ್ವರ ಕಾಲೋನಿ, ಬುತ್ತಣ್ಣಿ ಪೋಡು, ಕೆ ಕಾಲೋನಿ, ಮೊಣಕೈ ಪೋಡು, ಬಿಸಿಲುಕೆರೆ ಪೋಡು, ಶ್ರೀನಿವಾಸಪುರ ಕಾಲೋನಿ, ರಾಮಯ್ಯನ ಪೋಡು, ಎತ್ತೇಗೌಡನ ದೊಡ್ಡಿ, ದೇಸಿಪುರ ಕಾಲೋನಿ, ಪಾಲರ್, ವಿ.ಎಸ್.ದೊಡ್ಡಿ, ಅಸ್ತೂರು, ಪೋನ್ನಾಚ್ಚಿ, ಕತ್ತೆಕಲ್ಲು ಪೋಡು, ಯರಕಟ್ಟೆ, ಜೀರಗೆ ಗದ್ದೆ ಇಚ್ಚಲು ಕೆಬ್ಬೆ ದೊಡ್ಡಿ, ಸೇಬಿನ ಕೋಬೆ, ಪುಟ್ಟಿರಮ್ಮನ ದೊಡ್ಡಿ, ಕಗ್ಗಲಿ ಗುಂದಿ, ಮಾವತ್ತೂರು, ಚಿಕ್ಕ ಮರೂರು, ಮುಳ್ಳಕಟ್ಟೆ, ಗೊಂಬೆಗಲ್ಲು, ಹಾವಿನ ಮೂಲೆ, ದೋಣಿ ಮಡು ದೊಡ್ಡಿ, ಕೋಣನ ಕೆರೆ, ಮುತ್ತಗದಗದೆ ಪೋಡು, ಮಂಜಿಗುಂಡಿ ಪೋಡು, ಬಂಗ್ಲೇಪೋಡು, ಹೊಸ ಪೋಡು ಕಾಲೋನಿ, ಅಂಡೆ ಕುರುಬನ ದೊಡ್ಡಿ, ಗಾಣಿಗ ಮಂಗಲ, ರಾಚ್ಚಪಾಜಿ ನಗರ, ಕರಳಕಟ್ಟೆ, ನೆಲ್ಲಿಕದರು, ಕೆರೆದಿಂಬ ಪೋಡು, ದಂಟ್ಟಳ್ಳಿ, ಅಲಂಬಾಡಿ ಮತ್ತು ಹಿರಿಯಂಬಲ ಒಟ್ಟು 45 ಪೋಡುಗಳ 1516 ಕುಟುಂಬಗಳಿಗೆ 2616 ಎಕರೆಗೆ ಹಕ್ಕು ಪತ್ರಗಳನ್ನು ಚಾಮರಾಜನಗರ ಜಿಲ್ಲಾ ಆಡಳಿತವು ವಿತರಿಸಿರುತ್ತಾರೆ.

ದಿನಾಂಕ 2.10.2011 ರಂದು ಬಿಳಿಗಿರಿ ರಂಗಸ್ವಾಮಿ ವನ್ಯಜೀವಿಧಾಮದಲ್ಲಿ ವಾಸ ಮಾಡುವ 25 ಗ್ರಾಮ ಅರಣ್ಯ ಹಕ್ಕು ಸಮಿತಿಗಳ 33 ಪೋಡುಗಳಿಗೆ ಮೊದಲ ಹಂತದಲ್ಲಿ ಹಕ್ಕು ಪತ್ರಗಳನ್ನು ನೀಡಿರುತ್ತಾರೆ, ಸಮುದಾಯ ಹಕ್ಕು ಪತ್ರಗಳನ್ನು ಪೋಡುನ ಗ್ರಾಮ ಸಭಾ ಸದಸ್ಯರ ಹೆಸರಿನಲ್ಲಿ ನೀಡಲಾಗಿರುತ್ತದೆ ಮುಖ್ಯವಾಗಿ (1) ಒಡೆತನದ ಹಕ್ಕು ಗ್ರಾಮದ ಒಳಗೆ ಅಥವಾ ಹೊರಗೆ ಅರಣ್ಯದಲ್ಲಿ ಸಣ್ಣ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು ಪ್ರವೇಶಿಸುವ ಅವುಗಳನ್ನು ಬಳಸುವ ಮತ್ತು ವಿಲೆ ಮಾಡುವ ಇರುವ ಹಕ್ಕುಗಳು ಪರಿಭಾಷೆಯಲ್ಲಿ ಹೇಳಿರುವಂತೆ 2(ಐ) ಕಾಯಿದೆ 3(1)(ಸಿ) ರಲ್ಲಿರುವಂತೆ (2) ಜಲನಿಕಾಯಗಳಲ್ಲಿರುವ ಮೀನು ಮತ್ತು ಇತರೆ ಉತ್ಪನ್ನಗಳನ್ನು ಬಳಸುವ ಅಥವಾ ಅವುಗಳನ್ನು ಹೊಂದುವ ಮೇಯಿಸುವ ಮತ್ತು ಅಲೆಮಾರಿ ಅಥವಾ ಗ್ರಾಮ ಸಮುದಾಯಗಳಿಗೆ ಇರುವ ಪಾರಂಪರಿಕ ಋತುಕಾಲಿಕ ಸಂಪನ್ಮೂಲಗಳನ್ನು ಹೊಂದುವ ಇತರೆ ಹಕ್ಕುಗಳು (ನೀಲಾವತಿ ಕೆರೆ, ಮೀಣಿ ಮಾವು ಕೆರೆ) 3(1)(ಡಿ) ಕಾಯಿದೆಯಡಿ (3) ಸುಸ್ಥಿರ ಬಳಕೆಗಾಗಿ ಸಮುದಾಯವು ಪಾರಂಪರಿಕ ರಕ್ಷಿಸುತ್ತಿರುವ ಯಾವುದೇ ಸಮುದಾಯದ ಅರಣ್ಯ ಸಂಪನ್ಮೂಲವನ್ನು ರಕ್ಷಿಸುವ, ಪುನರ್‌ಉತ್ಪಾದಿಸುವ ಅಥವಾ ಸಂರಕ್ಷಿಸುವ ಅಥವಾ ನಿರ್ವಹಣೆ ಮಾಡುವ ಹಕ್ಕು ಗ್ರಾಮ ಸಭಾ ಸಮಿತಿಯಲ್ಲಿ ರಚನೆಯಾದ ಸಮಿತಿ ಪರಿಚ್ಛೇಧ 3(1)(ಐ) ರ ಕಾಯಿದೆ ಮತ್ತು ನಿಯಮ4 (1)(ಇ) ಯಲ್ಲಿರುವಂತೆ (4) ಜೈವಿಕ ವೈವಿಧ್ಯತೆ ಹಕ್ಕು ಮತ್ತು ಜೈವಿಕ ವೈವಿಧ್ಯತೆ ಮತ್ತು

ಸಾಂಸ್ಕೃತಿಕ ವೈವಿಧ್ಯತೆಗೆ ಸಂಬಂಧಿಸಿದ ಬೌದ್ಧಿಕ ಆಸ್ತಿ ಮತ್ತು ಪಾರಂಪರಿಕ ಜ್ಞಾನಕ್ಕೆ ಇರುವ ಸಮುದಾಯದ ಹಕ್ಕು ಪರಿಚ್ಛೇಧ 3(1)(ಕೆ) ಕಾಯಿದೆಯಂತೆ (5) 489 ಸೋಲಿಗರ ಪವಿತ್ರ ಸ್ಥಳಗಳಲ್ಲಿ ಪೂಜಿಸುವ ಮತ್ತು ಭೇಟಿ ನೀಡುವ ಹಾಗೂ ಆರಾಧಿಸುವ ಹಕ್ಕು ಪರಿಚ್ಛೇಧ 3(1) (ಕೆ) ರ ಕಲ್ಯಾಣಿ ಪೋಡು, ಸೀಗೆಬೆಟ್ಟ, ಪುರಾಣಿ ಪೋಡು ಕೆ.ದೇವರ ಹಳ್ಳಿ ಕೆ.ಕಾಲೋನಿ, ಬುತ್ತಣ್ಣಿ ಪೋಡು, ಮಾರಿಗುಡಿ ಪೋಡು, ಬೇಡಗುಳಿ, ಬಿಸಿಲುಕೆರೆ, ಕಾಡಿಗೆರೆ, ಶ್ರೀನಿವಾಸಪುರ ಕಾಲೋನಿ, ಮುನೇಶ್ವರ ಕಾಲೋನಿ, ಎತ್ತೇಗೌಡನದೊಡ್ಡಿ, ಹೊಸ ಪೋಡು, ಬೂದಿಪಡಗ, ಕುಳ್ಳೂರು, ಅಟ್ಟುಗುಳಿಪುರ, ಕಾಳಿಕಾಂಭ ಕಾಲೋನಿ, ಮುರುಟಿ ಪಾಳ್ಯ, ಶನಿವಾರ ಮುಂಟಿ ಮತ್ತು ಬೆಲ್ಲತ್ತ, ಹಿತ್ತಲಗುಡ್ಡೆ ಕಾಲೋನಿ, ಬಾಣವಾಡಿ, ಗೂಡೆಮಡು, ಅರಣ್ಯ ಹಕ್ಕು ಸಮಿತಿಗಳಿಗೆ ಸಮುದಾಯ ಹಕ್ಕುಪತ್ರಗಳನ್ನು ನೀಡಲಾಗಿದೆ. ಇದರಿಂದ ಮೂಲವಾಸಿ ಸೋಲಿಗರ ಬಾಳಿನಲ್ಲಿ ಒಂದು ಆಶಾಕಿರಣವನ್ನು ಮೂಡಿಸಿದೆ.

ಭೂಮಿಯ ಹಕ್ಕನ್ನು ಚಾಮರಾಜನಗರ ಜಿಲ್ಲೆಯಲ್ಲಿರುವ 1516 ಕುಟುಂಬಗಳಿಗೆ ನೀಡಿದ್ದು ಅವರ ಭೂಮಿಯ ಒಡೆಯರಾಗುವ ಹಕ್ಕನ್ನು ಸ್ವಾತಂತ್ರ ಬಂದು 64 ವರ್ಷಗಳು ಕಳೆದ ನಂತರ ನೀಡಿದಾಗಿದೆ, ಇದರಿಂದ ಮೂಲವಾಸಿಗಳು ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪಡೆದುಕೊಳ್ಳುವ ಮತ್ತು ಅವರು ಅದರ ಒಡೆಯರು ಆಗುವ ಹಕ್ಕನ್ನು ಸರ್ಕಾರ ಮೂಲವಾಸಿಗಳಿಗೆ ನೀಡಿದೆ, ಮೂಲವಾಸಿಗಳು ಯಾರ ಹಂಗು ಇಲ್ಲದೆ ಬದುಕುತ್ತಿದ್ದಾರೆ ಮತ್ತು ಸಂಪ್ರದಾಯಿಕ ಹಕ್ಕುಗಳನ್ನು ನೀಡಿ ಮೂಲವಾಸಿಗಳಿಗೆ ಸರ್ಕಾರ ಮತ್ತು ಜಿಲ್ಲಾ ಆಡಳಿತ ಬಹಳ ಉತ್ತಮವಾದ ಕೆಲಸ ಮಾಡಿರುತ್ತಾರೆ ಇದರಿಂದ ಮೂಲವಾಸಿಗಳು ಸ್ವಾಲಂಬಿಗಳಾಗಿ ಜೀವನ ನಡೆಸಲು ಸಹಾಯವಾಗಿರುತ್ತದೆ.

ಅರಣ್ಯ ಹಕ್ಕುಗಳ ಮಾನ್ಯತೆ ಕಾಯಿದೆಯಡೆಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಉಳಿದ 800 ಕುಟುಂಬಗಳಿಗೆ ಭೂಮಿಯ ಹಕ್ಕು ಮತ್ತು 79 ಅರಣ್ಯ ಹಕ್ಕು ಸಮಿತಿಗಳಿಗೆ ಸಮುದಾಯ ಹಕ್ಕುಗಳನ್ನು ನೀಡಬೇಕಾಗಿರುತ್ತದೆ. ದೇಶದಲ್ಲಿಯೇ ಚಾಮರಾಜನಗರ ಜಿಲ್ಲೆಯು ಮೂಲವಾಸಿ ಜನರಿಗೆ ಸಮುದಾಯ ಹಕ್ಕುಗಳನ್ನು ಬಿಳಿಗಿರಿ ರಂಗಸ್ವಾಮಿ ವನ್ಯಜೀವಿ ಧಾಮದಲ್ಲಿ ಗ್ರಾಮ ಸಭಾ ಸದಸ್ಯರಿಗೆ ನೀಡಿರುತ್ತದೆ. ಮೂಲವಾಸಿಗಳಿಗೆ ಹಕ್ಕುಗಳನ್ನು ನೀಡಿ ಅವರ ಅಭಿವೃದ್ಧಿಗೆ ಸಹಾಯ ಮಾಡಿದಂತಾಗಿದೆ. ಮತ್ತು ಅವರಿಗೆ ಹಕ್ಕುಗಳನ್ನು ನೀಡಿ ಮೂಲವಾಸಿಗಳು ಸ್ವಾವಲಂಬಿ ನೆಮ್ಮದಿ ಜೀವನ ನಡೆಸಲು ಹಾಗೂ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳಲು ಸರ್ಕಾರ ಮತ್ತು ಚಾಮರಾಜನಗರ ಜಿಲ್ಲಾ ಆಡಳಿತವು ಮೂಲವಾಸಿ ಜನರಿಗೆ ನೆರವಾಗಿದೆ

**ಸಮಸ್ಯೆಗೆ ಮೂಲ ಕಾರಣ**

1. ಪರಿಶಿಷ್ಟ ವರ್ಗದ ಅರ್ಜಿದಾರರಿಗಿಂತ ಇತರೆ ಪಾರಂಪರಿಕ ಅರಣ್ಯ ವಾಸಿಗಳು 75 ವರ್ಷಗಳ ಪೂರಕ ದಾಖಲೆಗಳನ್ನು ಸಲ್ಲಿಸಲು ಸಾಧ್ಯವಾಗದಿರುವುದು ಯೋಜನೆ ಹಿನ್ನಡೆಗೆ ಕಾರಣವಾಗಿದೆ. ಈ ಕಾರಣಕ್ಕಾಗಿ ಅರ್ಜಿಗಳು ಹೆಚ್ಚಿನ ಸಂಖ್ಯೆಯಲ್ಲಿ ತಿರಸ್ಕೃತಗೊಳ್ಳುತ್ತಿವೆ, ಇಲ್ಲವೇ ಇತ್ಯರ್ಥವಾಗದೆ ಬಾಕಿ ಉಳಿದಿವೆ.

2. ವಾಸ್ತವ್ಯದ ಬಗ್ಗೆ ಸಾಕ್ಷ್ಯ ಒದಗಿಸಲು ಜನಗಣತಿ, ಮೋಜಣಿ, ಭೂ ಕಂದಾಯ ನಿರ್ಧಾರದ ವರದಿ, ನಕ್ಷೆ ಇತರ ಅರಣ್ಯ ದಾಖಲೆ ಅಥವಾ ಸರ್ಕಾರಿ ಅಧಿಸೂಚನೆ ಬೇಕಾಗುತ್ತದೆ. ಆದರೆ ಇಂತಹ ದಾಖಲೆಗಳು ಹೆಚ್ಚಿನವರಲ್ಲಿ ಇಲ್ಲ. ಇವರ ಪೈಕಿ ಬಹುತೇಕರಿಗೆ ಅಕ್ಷರಜ್ಞಾನದ ಗಂಧಗಾಳಿಯೇ ಇಲ್ಲ. ಹೀಗಿರುವಾಗ ಇವುಗಳನ್ನೆಲ್ಲ ಹೊಂದಿಸುವುದು ಕಷ್ಟಸಾಧ್ಯ.
3. ಈಗಾಗಲೇ ಅರಣ್ಯದಿಂದ ಹೊರ ತಂದವರು ಕೂಡ ಅರಣ್ಯ ಭೂಮಿ ಹಕ್ಕಿಗಾಗಿ ಅರ್ಜಿ ಸಲ್ಲಿಸುತ್ತಿರುವುದು.
4. ಒಂದು ಕುಟುಂಬದಲ್ಲಿ ಒಂದಕ್ಕಿಂತ ಅಧಿಕ ಸಂಖ್ಯೆ ಸದಸ್ಯರು ಅರ್ಜಿ ಸಲ್ಲಿಸಿರುವುದು, ಕಂದಾಯ ಇಲಾಖೆ ವಶದಲ್ಲಿರುವ ಭೂಮಿಗೂ ಹಕ್ಕು ಪತ್ರ ನೀಡುವಂತೆ ಕೋರಿರುವುದು ಕೂಡ ಅರ್ಜಿಗಳನ್ನು ತಿರಸ್ಕರಿಸಲು ಕಾರಣವಾಗುತ್ತಿದೆ ಎಂದು ಈ ಮೂಲಗಳು ತಿಳಿಸಿವೆ.

**ಸಲಹೆಗಳು:**

- ಚಾಮರಾಜನಗರ ಜಿಲ್ಲೆಯಲ್ಲಿ ಅರಣ್ಯ ಹಕ್ಕುಗಳ ಮಾನ್ಯತೆ ಕಾಯಿದೆ 2006 ರ ಅಡಿಯಲ್ಲಿ ಹಾಲಿ ಅರಣ್ಯ ಭೂಮಿ ಹೊಂದಿರುವ ಮತ್ತು ಹಕ್ಕು ಪತ್ರಕ್ಕೆ ಅರ್ಜಿ ಸಲ್ಲಿಸಿರುವ 250 ಕುಟುಂಬಗಳಿಗೆ ಭೂಮಿಯ ಹಕ್ಕು ಮತ್ತು 117 ಪೋಡು/ಕಾಲೋನಿಗಳಿಗೆ ಸಮುದಾಯ ಹಕ್ಕು ಪತ್ರಗಳನ್ನು ತಕ್ಷಣ ವಿತರಿಸಲು ಕ್ರಮಕೈಗೊಳ್ಳಬೇಕು.
- ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ, ಶ್ರೀ ಮಲೆಮಹದೇಶ್ವರ ಬೆಟ್ಟ ವನ್ಯಜೀವಿ ಧಾಮ, ಕಾವೇರಿ ವನ್ಯಜೀವಿ ಧಾಮದ ವ್ಯಾಪ್ತಿಯ ಒಳಗೆ ಮತ್ತು ಅಂಚಿನಲ್ಲಿ ಮತ್ತು ಬಂಡಿಪುರ ರಾಷ್ಟ್ರೀಯ ಉದ್ಯಾನವನದ ಅಂಚಿನಲ್ಲಿ ಅರಣ್ಯ ಹಕ್ಕು ಕಾಯಿದೆಯಡಿ ಅರಣ್ಯ ಭೂಮಿ ಪಡೆದುಕೊಂಡಿರುವ ಆದಿವಾಸಿ ಕುಟುಂಬಗಳಿಗೆ ವಾಸದ ಮನೆಗಳು, ಕುಡಿಯುವ ನೀರು, ರಸ್ತೆ, ವಿದ್ಯುತ್, ಸಮುದಾಯ ಭವನ, ಶಾಲೆ ನಿರ್ಮಿಸಿಕೊಳ್ಳುವ ಅರಣ್ಯ ಹಕ್ಕು ಕಾಯಿದೆ 2006 3.1 (ಎ) ರಡಿಯಲ್ಲಿ ಅವಕಾಶವಿರುತ್ತದೆ, ಮೂಲಭೂತ ಸೌಕರ್ಯಗಳನ್ನು ತಲುಪಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯ ಸಹಕರಿಸುವಂತೆ ಕ್ರಮಕೈಗೊಳ್ಳಬೇಕು.
- ಸಮುದಾಯ ಸಂಪನ್ಮೂಲಗಳನ್ನು (ಕಿರು ಅರಣ್ಯ ಉತ್ಪನ್ನಗಳಾದ ಜೇನು, ನೆಲ್ಲಿಕಾಯಿ, ಪಾಚಿ, ಹುಣಸೆ ಹಣ್ಣು, ಮಾಗಳಿಬೇರು, ಕಸಪೊರಕೆ, ದೂಪ, ಸೀಗೆಕಾಯಿ, ಅಂಟುವಾಳ, ಅರಳೆ ಕಾಯಿ, ಬೆಲದ ಕಾಯಿ, ಬಿದಿರು, ಮಾವಿನ ಮಿಡಿ, ಮೀನುಗಾರಿಕೆ) ಸಂಗ್ರಹಿಸಿ, ಸಂಸ್ಕರಿಸಿ ಮಾರಾಟ ಮಾಡುವುದಕ್ಕೆ ಹಾಗೂ ಅರಣ್ಯ ಹಕ್ಕು ಸಮಿತಿಗಳ ಮೂಲಕ ರಹದಾರಿ ನೀಡಲು ಕ್ರಮಕೈಗೊಳ್ಳುವುದು.
- ಮಲೆ ಮಹದೇಶ್ವರ ವನ್ಯಜೀವಿಧಾಮ ಮತ್ತು ಕಾವೇರಿ ವನ್ಯಜೀವಿ ಧಾಮದಲ್ಲಿ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು ಅರಣ್ಯ ಹಕ್ಕು ಕಾಯಿದೆ 2006 ರಡಿಯಲ್ಲಿ ಅರ್ಜಿ ಸಲ್ಲಿಸಿರುವ ಪೋಡುಗಳಿಗೆ ಸಮುದಾಯ ಹಕ್ಕುಗಳನ್ನು ನೀಡುವುದು.
- ಅರಣ್ಯ ಹಕ್ಕು ಕಾಯಿದೆಯಡಿ ಭೂಮಿ ಹಕ್ಕು ಪತ್ರ ಪಡೆದಿರುವ ಕುಟುಂಬಗಳಿಗೆ ನೀರಾವರಿ ಸೌಲಭ್ಯ, ತೋಟಗಾರಿಕೆ ಹಾಗೂ ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

- ಅರಣ್ಯದ ಒಳಗೆ ಮತ್ತು ಅಂಚಿನಲ್ಲಿರುವ ಪೋಡು/ಕಾಲೋನಿ/ದೊಡ್ಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಬೇಕು.

ಕೆಲ ಅರಣ್ಯ ವಾಸಿಗಳಿಗೆ ಮೂರು ತಲೆ ಮಾರಿನಿಂದ ವಾಸವಿದ್ದೇವೆ ಎಂಬ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವಾಗುತ್ತಿಲ್ಲ. ಹಿರಿಯರ ಸಮ್ಮುಖದಲ್ಲಿ ಮಾಡಿದ ಪಂಚನಾಮೆ ಆಧಾರದಲ್ಲಿ, ಸರ್ಕಾರ ಅರಣ್ಯವಾಸಿಗಳಿಗೆ ಭೂಮಿ ಕೊಡಬೇಕು. ಇಲ್ಲದೇ ಅರಣ್ಯ ಹಕ್ಕು ಮಾನ್ಯತೆ ಕಾಯ್ದೆ ತಿದ್ದುಪಡಿಗೆ ತರಲು ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಡ ಹಾಕಬೇಕಿದೆ.

**ಪರಾಮರ್ಶನ ಗ್ರಂಥಗಳು**


- Agarwal, A., "Implementation of Forest Rights Act, Changing forest Landscape and Politics of REDD in India"-Resource Energy and Development 8(2), 131-148
- Asher, M. and Agarwal, N., Rceognising The Historical Injustices: Campaign for the Forest Rights Act, 2006, Natioanl Centre For Advocacy Studies (NCAS 2011)
- Ministry of tribal Affaris, Status report on implementation of the Scheduled Tribes and Other Traditional Forest Dwellers (Recognition of Forest Rights) Act, 2006 [for the period ending 28.02.2017], Governament of India, retrieved from tribal.nic.in/FRA/data/MPRFeb2017.pdf.
- Sharma, M. (2012) "Dalit and Indian Environmental Politics", Economic and Political Weekly, Vol.XLVII No.23, June 9, pp 46-52.
- Tushar Dash, (2010), The Forest Rights Act: Redefining Biodiversity Conservation in India, policy matters, retrieved from https://fra.org.in/pg%2033-40%20-%20tushar.pdf.